10. Statement made by the Chief Minister

re · Communal riot at Shidlaghatta

SRI R. VENKATARAMAIAH.—Sir, Some of our collegues who have gone to Shidlaghatta have been assaulted. This is a very serious matter. They have gone on a noble mission· I request the hon. Chief Minister to make a statement on this. After all, they are our own colleagues. They have been hospitalised· It is very unfortunate thing.

ಶ್ರೀ ಬಿ. ಎಸ್. ಯಡಿಯೂರಪ್ಪ.— ಮಾನ್ಯ ರಮೇಶ್ ಕುಮಾರ್ ಅವರಿಗೆ ಹಾಗೂ ರೋಷನ್ ಬೇಗ್ ಅವರಿಗೆ ತುಂಬಾ ಏಟು ಬಿದ್ದಿದೆ. ಅಲ್ಲಿ ಪರಿಸ್ಥಿತಿ ಏನಿದೆಯೋ ಗೊತ್ತಾಗುತ್ತಿಲ್ಲ. ಸನ್ಮಾನ್ಯ ಮುಖ್ಯ ಮಂತ್ರಿಗಳಿಗೆ ಇನ್‌ಫರ್ಮೇಷನ್ ಇದ್ದರೆ ಈಗ ಅಥವಾ ಅರ್ಧ ಗಂಟೆಬಿಟ್ಟು ಸ್ಟೇಟ್‌ಮೆಂಟ್ ಮಾಡಲಿ.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ಇಂದು ಬೆಳಿಗ್ಗೆ ಈ ಸದನದ ಸದಸ್ಯರಾದ ಮಾನ್ಯ ರಮೇಶ್ ಕುಮಾರ್ ಅವರು, ಡಾ. ಮಹದೇವಪ್ಪ ಅವರು ಮಾನ್ಯ ರೋಶನ್‌ಬೇಗ್ ಅವರು ಮತ್ತು ಪಕ್ಷದ ಕಾರ್ಯಕರ್ತರಾದ ಮಾನ್ಯ ಸುದರ್ಶನ್ ಅವರು ನಾಲ್ಕು ಜನ ಶಿಡ್ಲಘಟ್ಟಕ್ಕೆ ಹೋಗುವಾಗ ದಾರಿಯಲ್ಲಿ ಅವರ ಮೇಲೆ ಅಸಾಲ್ಟ್ ಮಾಡಿದ್ದು ನಿಜ. ಈಗತಾನೆ ಅವರನ್ನು ಆಸ್ಪತ್ರೆಗೆ ಅಡ್ಮಿಟ್ ಮಾಡಿದ್ದಾರೆ. ನಮ್ಮ ಮಾನ್ಯ ವಾರ್ತಾ ಮಂತ್ರಿಗಳಾದ ಎಂ. ಪಿ. ಪ್ರಕಾಶ್ ಅವರು, ಜೀವರಾಜ ಆಳ್ವ ಅವರು ಮತ್ತು ಕೆಲವು ಜನ ನೋಡಿಕೊಂಡು ಬಂದಿದ್ದಾರೆ. ರಮೇಶ್‌ಕುಮಾರ್ ಅವರಿಗೆ ಬಹಳ ಘಾಸಿಯಾಗಿದೆ. ನಾನೂ ಕೂಡ ಸ್ವಲ್ಪ ಹೊತ್ತಿನಲ್ಲೇ ಹೋಗ ಬೇಕೆಂದಿದ್ದೇನೆ. ಇದು ನಿಜವಾಗಿಯೂ ದುರ್ದೈವದ ಘಟನೆ. ಹೋದ ಉದ್ದೇಶ ಅವರದು ಏನೆಂದರೆ ಅಲ್ಲಿಯ ಜನರನ್ನು ಭೇಟಿಯಾಗಿ ಶಾಂತಿಯನ್ನು ಸ್ಥಾಪನೆ ಮಾಡಬೇಕು ಎಂಬುದು. ಆದರೆ ಹೋಗುವುದಕ್ಕಿಂತ ಮೊದಲೇ ಈ ರೀತಿ ಅವರು ಅಸಾಲ್ಟ್‌ಗೆ ಒಳಗಾಗುತ್ತಾರೆಂದು ಯಾರೂ ನಿರೀಕ್ಷೆ ಮಾಡಿರಲಿಲ್ಲ.

ಶ್ರೀ ಪಂಪಾಪತಿ.—ಪೋಲೀಸರನ್ನು ಜಾಸ್ತಿ ಕಳುಹಿಸಿದ್ದೀವೆ ಎಂದು ಹೇಳಿದ್ದಿರಿ. ಆದರೂ...

ಉಪಾಧ್ಯಕ್ಷರು.—ತಾವು ಬೇರೆ ರೂಪದಲ್ಲಿ ಕೇಳಿ ಇದನ್ನು. ಮಾನ್ಯ ಮಂತ್ರಿಗಳು ದಯವಿಟ್ಟು ಮುಂದುವರೆಸಿ.

೧೯೮೫-೮೬ನೇ ಸಾಲಿಗೆ ಸಂಬಂಧಿಸಿದ ಅನುದಾನಗಳ ಬೇಡಿಕೆಗಳ ಮೇಲಿನ ಚರ್ಚೆ

(ಮುಂದುವರೆದುದು)

ಶ್ರೀ ಎಂ. ಚಂದ್ರಶೇಖರ್.—೬ನೇ ಪಂಚವಾರ್ಷಿಕ ಯೋಜನೆಯಡಿಯಲ್ಲಿನ ಪ್ರಗತಿಯಂನ್ನು ನಾನು ತಿಳಿಸಿದೆ. ೬ನೇ ಪಂಚವಾರ್ಷಿಕ ಯೋಜನೆ ಆದಮೇಲೆ ೧೯೮೫-೮೫ರಿಂದ ಮೂರು ವರ್ಷಗಳಲ್ಲಿ ಜಿಲ್ಲಾ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಯೋಜನೆಗೆ ೧೬ ಕೋಟಿ ೬೬ ಲಕ್ಷ ರೂಪಾಯಿಗಳ ಪೆಚ್ಚ ಆಗಿತ್ತು. ಇತರೆ ರಸ್ತೆಗಳು ಮತ್ತು ಸೇತುವೆಗಳಿಗೆ ೨೬ ಕೋಟಿ ರೂಪಾಯಿ ಪೆಚ್ಚ ಆಗಿತ್ತು. ಗ್ರಾಮೀಣ ಸೇತುವೆಗಳ ಕಾಮಗಾರಿಗಳಿಗೆ ೨೧ ಕೋಟಿ ೬೧ ಲಕ್ಷ ರೂಪಾಯಿ ಪೆಚ್ಚ ಆಗಿವೆ. ಇದರಿಂದಾಗಿ ಮೂರು ರಾಜ್ಯ ಹೆದ್ದಾರಿಗಳ ೨೨೦ ಕಿಲೋಮೀಟರ್ ಉದ್ದ ಹೆಚ್ಚಾಯಿತು. ಸೇತುವೆಗಳು ೬೬, ಹಾಗೂ ಜಿಲ್ಲಾ ರಸ್ತೆಗಳು ೫೧೯, ಗ್ರಾಮಾಂತರ ರಸ್ತೆಗಳು ೨೨೨ ಕಿಲೋಮೀಟರ್, ಹರಿಜನವಾಡ ರಸ್ತೆ ೪೯೩.

ಶ್ರೀ ಎಂ. ರಾಮಪ್ಪ.—ತಾವು ಸೇತುವೆಗಳನ್ನು ಕಟ್ಟಿದ್ದೀವೆಂದು ಹೇಳಿದ್ದೀರಿ. ಹಗರಿ ಬ್ರಿಡ್ಜ್ ಮಾಡಲಿಕ್ಕೆ ಸೆಂಟ್ರಲ್ ಫಂಡ್ಸ್ ತೆಗೆದುಕೊಂಡಿದ್ದೀರಿ, ಮೂರು ವರ್ಷಗಳಿಂದ ಏನೂ ಮಾಡಿಲ್ಲ.